ಸಂಗತಿಗಳು ಜನರ ಮನಸ್ಸಿನಲ್ಲಿದ್ದರೆ, ನಾನು ಬೆಳೆದ ಪರಿಸರದಲ್ಲಿ ಸಂತರನ್ನು ಕುರಿತಾದ ಕಾವ್ಯಕಥನ, ದಂತಕಥೆಗಳು ವ್ಯಾಪಕವಾಗಿದ್ದವು. ಹಾಗೆ ನೋಡಿಕೊಂಡರೆ ನಾವೆಲ್ಲರೂ ಸಹಜ ಬದುಕಿನ ಜಾನಪದ ವಿಶ್ವವಿದ್ಯಾಲಯದಿಂದ ಸಾಂಪ್ರದಾಯಿಕ ಪಠ್ಯಗಳ ವಿಶ್ವವಿದ್ಯಾಲಯಗಳಿಗೆ ಪ್ರವೇಶ ಮಾಡಿದೆವೆಂತಲೇ ಹೇಳಬೇಕು. ಸಹಜವಾಗಿಯೇ ಜಾನಪದ ಜಗತ್ತಿನ ಅರಿವಿದ್ದ ನಾನು ವಿಶ್ವವಿದ್ಯಾಲಯದಲ್ಲಿ ಕಲಿತ ನಂತರ, ಅದನ್ನೆಲ್ಲ ಮತ್ತೊಮ್ಮೆ ಪರೀಕ್ಷಿಸುವ ನಿಮಿತ್ತವೋ ಎಂಬಂತೆ ಕರ್ನಾಟಕದ ಗ್ರಾಮಪ್ರದೇಶಗಳಲ್ಲಿ ಅಥವಾ ಹೊರ ರಾಜ್ಯಗಳಲ್ಲಿ ಅಡ್ಡಾಡಿದ್ದನ್ನೆಲ್ಲ ಸಾಮಾಜಿಕ ಚರಿತ್ರೆಯಾಗಿ, ಜನಪದ ಜೀವನ ಕಥನವಾಗಿ ನೋಡತೊಡಗಿದೆ. ಅದೇ ಇತ್ತೀಚೆಗೆ ಧಾರವಾಡದ ಮನೋಹರ ಗ್ರಂಥಮಾಲೆಯವರು ಪ್ರಕಟಿಸಿದ ಪುಸ್ತಕ 'ಕಾಲು ದಾರಿಯ ಕಥನಗಳು'. ನೀವು ಅಂದಂತೆ ಅದು ಸಾಂಸ್ಕೃತಿಕ ಚರಿತ್ರೆಯೂ ಆಗಿರಬಹುದು. ಇದು ಸಾಮಾನ್ಯವಾಗಿ ಎಲ್ಲಾ ಅಧ್ಯಾಪಕರು ತಮ್ಮ ಬಿಡುವಿನ ವೇಳೆಯಲ್ಲಿ ಮಾಡಬಹುದಾದ ಅಗತ್ಯದ ಕೆಲಸ ಎನಿಸುತ್ತದೆ. ವಿಶ್ವವಿದ್ಯಾಲಯ, ಕಾಲೇಜುಗಳಲ್ಲಿ ಇರುವ ಕಲಾವಿಭಾಗದ ಅಧ್ಯಾಪಕರು ಹೀಗೆ ಮಾಡುವುದಾದರೆ ಅವರ ಅಧ್ಯಾಪನಕ್ಕೊಂದು ಹೊಸ ತಿಳಿವು ಮತ್ತು ಶಕ್ತಿ ದೊರೆಯುತ್ತದೆ.

- **ಚರಿತ್ರೆ ಗಮನಿಸದ ಲೋಕಗಳ ಕುರಿತ ಕಾಳಜಿ ಇತ್ತೀಚಿನ ವರ್ಷಗಳಲ್ಲಿ ಬೇರೆ ಬೇರೆ ರೂಪಗಳಲ್ಲಿ ವ್ಯಕ್ತವಾಗುತ್ತಿದೆ. ಮರೆತುಹೋದ, ಕಳೆದುಹೋದ, ದಮನಿತರ ಅವ್ಯಕ್ತ ನೋಟಗಳನ್ನು ಒಳಗೊಳ್ಳುವ ಕಾಳಜಿ ಇಲ್ಲಿದೆ. ನೀವು ನಿಮ್ಮ ಬರಹಗಳ ಮೂಲಕ ಸಾಮಾಜಿಕ ಇಲ್ಲವೇ ಜನಪದೀಯ ಚರಿತ್ರೆಯನ್ನು ಪ್ರತಿಪಾದಿಸುತ್ತಿರುವಿರಿ. ನೀವೇ ಬಳಸಿರುವ 'ಕಾಲುದಾರಿ' ರೂಪಕದ ಹಾಗೆ ಕಾಣುತ್ತಿದೆ. ಚರಿತ್ರೆಯ ಮರು ವ್ಯಾಖ್ಯಾನಕ್ಕೆ ಇಂತಹ ಕಾಲುದಾರಿಗಳ ಅಗತ್ಯ ಎಷ್ಟು?**

ನಾನು ಸ್ನಾತಕೋತ್ತರ ಪದವಿ ಓದುವ ಸಂದರ್ಭಕ್ಕೆ ಅಭ್ಯಾಸ ಮಾಡಿದ್ದೇ ಕರ್ನಾಟಕದ ಇತಿಹಾಸ ಮತ್ತು ಶಾಸನಗಳನ್ನು. ಆ ಸಂಗತಿಗಳೇ ನಿಜ ಎಂತಲೂ ಅಂದುಕೊಂಡಿದ್ದೆ. ನನ್ನ ಸುತ್ತಿನ ವಿದ್ವಾಂಸರು ಅದು ಮೈಸೂರು, ಬೆಂಗಳೂರಿನಲ್ಲಾಗಲೀ, ಉದ್ಯೋಗ ನಿಮಿತ್ತ ಸೇರಿದ ಐತಿಹಾಸಿಕ ಪ್ರದೇಶ ಚಿತ್ರದುರ್ಗದಲ್ಲಾಗಲೀ ಅಕ್ಷರ ಇತಿಹಾಸವೇ, ಶಾಸನ ಮಾಹಿತಿಯೇ ಸರಿ ಮತ್ತೊಂದಿಲ್ಲ ಅಂದುಕೊಂಡಿದ್ದರು. ಗ್ರಾಮೀಣ ಕಾಲುದಾರಿಯಲ್ಲಿ ಸುತ್ತತೊಡಗಿದಮೇಲೆ ನನಗೆ ಕಾಣದ, ಕೇಳದ ಅಸಂಖ್ಯಾತ ಜನಪದ ಸಮೂಹಗಳಿವೆ, ಅವರದೇ ಜೀವನಕ್ರಮ, ಸಾಹಸಗಾಥೆಗಳು, ಜನಪದ ಚರಿತ್ರೆ ಇದೆ ಎಂದೆನಿಸಿತು. ಅದು ಶಾಸನೋಕ್ತ ಮಾಹಿತಿಗಳಿಗಿಂತ ಹೆಚ್ಚು ವಾಸ್ತವ, ರೋಚಕ ಮತ್ತು ನೋವಿನ ಕಥನಗಳಾಗಿಯೂ ಇದ್ದವು. ಹಾಗಾಗಿ ರಾಜಮಾರ್ಗದ ಕಥನಗಳು ಅವರವರ ಪರಾಕ್ರಮದ್ದಾದರೆ, ಆ ಪರಾಕ್ರಮವು ಈ ಕಾಲುದಾರಿಯ ಸನಿಹದ ಗ್ರಾಮಸ್ಥರಿಗೆ ತಂದೊಡ್ಡಿದ ಸಮಸ್ಯೆಗಳೇನು ಎಂಬುದು ಅರಿವಾಯಿತು. ಕುಮಾರವ್ಯಾಸ, 'ಅರಸನೆಂಬವ ರಾಕ್ಷಸ, ಮಂತ್ರಿಗಳು ಮೊರೆವ ಹುಲಿಗಳು, ಕರಣಿಕರೆಂಬವರು ರಣಹದ್ದುಗಳು ಉರಿ ಉರಿವುತಿದೆ ದೇಶ. ಬಡವರ ಬಿನ್ನಪವನಿನ್ನಾರು ಕೇಳುವರು' ಎನ್ನುತ್ತಾನಲ್ಲಾ, ಅದು ನನಗೆ ನನ್ನ ಕಾಲುದಾರಿಯ ಓಡಾಟದಲ್ಲಿ ನಿಜವಾಗಿಯೂ ಗೋಚರವಾಯಿತು. ಹಾಗಾಗಿ ನಾವು ಓದುವ ಸಿಂಹಾಸನಗಳ ಚರಿತ್ರೆಗಿಂತ ಬೇರೇನಾದರೂ ಹೇಳಬಹುದೇ ಎಂಬ ಪ್ರಶ್ನೆ ಎದುರಾಗುವಲ್ಲಿ, ಹೌದು ಹೇಳಬೇಕಾದದ್ದು ಬಹಳವಿದೆ ಎನಿಸಿತು. ಆದಿವಾಸಿಗಳನ್ನಾಗಲೀ, ಅಲೆಮಾರಿಗಳನ್ನಾಗಲೀ ಸಿಂಹಾಸನದ ಮೇಲೆ ಕೂತವರು ಎಂದಾದರೂ ಮನುಷ್ಯರು ಎಂದು ಪರಿಗಣಿಸಿದ್ದುಂಟೆ, ಹಾಗೆ ಪರಿಗಣಿಸಿದ್ದರೆ ಇಂದೂ ಅವರು ಆ ಸ್ಥಿತಿಯಲ್ಲಿರುತ್ತಿದ್ದರೆ? ಅವರು ಎಂಥ ಸಂದರ್ಭದಲ್ಲಿ